ಕರ್ನಾಟಕ ಸರ್ಕಾರ

ಸಂ:ಸಿಬ್ಬ:ಖರೀದಿ-1:ಸಿಆರ್-19:91-92

ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ,
ನಂ.9:1, ಶ್ರೀ ಪ್ರಶಾಂತ ಕಾಂಪ್ಲೆಕ್ಸ್,
ಶಿಂಪಿಸ್ ರಸ್ತೆ, ಬೆಂಗಳೂರು-27,
ದಿನಾಂಕ :25-7-1991.

## ಕಛೇರಿ ಆದೇಶ

ವಿಷಯ:- ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ದಿನಪತ್ರಿಕೆ ಮತ್ತು ನಿಯತ ಕಾಲಿಕಗಳ ಖರೀದಿ ಕುರಿತು.

ಉಲ್ಲೇಖ:- ನಿರ್ದೇಶನಾಲಯದ ಆದೇಶ ಸಂ:ಸಿಟಿಎಸ್:ಪಿಯುಆರ್-4:ಸಿಆರ್-3:84-85 ದಿನಾಂಕ:19-4-1984.

-::-

ಮೇಲ್ಕಂಡ ಉಲ್ಲೇಖಿತ ಆದೇಶದಲ್ಲಿ ಎಲ್ಲಾ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಆರ್ಥಿಕ ಪ್ರತ್ಯಾಯೋಜನೆ ಕೈಪಿಡಿಯಲ್ಲಿ ವಿಶ್ಲೇಷಿಸಿದಂತೆ [illegible] ದಿನ, ವಾರ ಮತ್ತು ಮಾಸಪತ್ರಿಕೆಗಳನ್ನು ಖರೀದಿಸಲು ಮಂಜೂರಾತಿ ನೀಡಲಾಗಿತ್ತು. ಮೇಲ್ಕಂಡ ಆದೇಶದಲ್ಲಿ ಸೂಚಿಸಲಾಗಿರುವ ಕೆಲವು ಪತ್ರಿಕೆಗಳು ಪ್ರಕಟಣೆ ಆಗದೆ ಇರುವ ಹಾಗೂ ಕೆಲವು ಹೊಸ ಪತ್ರಿಕೆಗಳು ಮಾರುಕಟ್ಟೆಯಲ್ಲಿ ಲಭ್ಯವಿರುವ ಕಾರಣ ಸದರೀ ಆದೇಶವನ್ನು ಪರಿಷ್ಕರಿಸಿ ಈ ಕೆಳಗೆ ಸೂಚಿಸಿರುವಂತೆ( ಅನುಬಂಧದಲ್ಲಿ ಪಟ್ಟಿ ಮಾಡಲಾಗಿರುವ) ನಿಯತ ಕಾಲಿಕಗಳನ್ನು ಖರೀದಿಸಲು ಈ ಮೂಲಕ ಮಂಜೂರಾತಿ ನೀಡಲಾಗಿದೆ.

ಆಯಾ ಕೈಗಾರಿಕಾ ತರಬೇತಿ ಸಂಸ್ಥೆಗಳ ಗಾತ್ರಕ್ಕೆ ಅನುಗುಣವಾಗಿ ಈ ಕೆಳಗೆ ನಮೂದಿಸಿರುವಂತೆ ದಿನಪತ್ರಿಕೆ ಮತ್ತು ನಿಯತ ಕಾಲಿಕಗಳನ್ನು ಖರೀದಿಸತಕ್ಕದ್ದು.

| ಕ್ರ. ಸಂ. | ಕೈಗಾರಿಕಾ ತರಬೇತಿ ಸಂಸ್ಥೆಗಳು | ದಿನಪತ್ರಿಕೆಗಳು | | ನಿಯತಕಾಲಿಕಗಳು | | |
|---|---|---|---|---|---|---|
| | | ಕನ್ನಡ | ಇಂಗ್ಲೀಷ್ | ಕ್ಯಾಟಗರಿ 1 | ಕ್ಯಾಟಗರಿ 2 | ಕ್ಯಾಟ 3ಗರಿ |
| 1. | ಮಂಜೂರಾತಿ ತರಬೇತಿದಾರರ ಸಂಖ್ಯೆ 500 ಮತ್ತು ಅದಕ್ಕಿಂತಲೂ ಹೆಚ್ಚು | 2 | 3 | 2 | 4 | 4 |
| 2. | ಮಂಜೂರಾತಿ ತರಬೇತಿದಾರರ ಸಂಖ್ಯೆ 500ಕ್ಕೆ ಒಳಪಟ್ಟು ಹಾಗೂ 200ಕ್ಕೆ ಮೇಲ್ಪಟ್ಟು | 2 | 2 | 2 | 3 | 4 |
| 3. | ಮಂಜೂರಾತಿ ತರಬೇತಿದಾರರ ಸಂಖ್ಯೆ 200ಕ್ಕೆ ಒಳಪಟ್ಟು | 1 | 1 | 1 | 3 | 3 |

ಈ ಸಂಬಂಧ ಖರೀದಿಯ ವೆಚ್ಚವನ್ನು ಆಯಾ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಒದಗಿಸಿರುವ ''2230- ಕಾರ್ಮಿಕ ಮತ್ತು ಉದ್ಯೋಗ, 03- ತರಬೇತಿ, 101-ಔದ್ಯೋಗಿಕ ತರಬೇತಿ ಸಂಸ್ಥೆಗಳು:ಕೇಂದ್ರಗಳು, 0-01, 221- ಸಾಮಗ್ರಿಗಳು ಮತ್ತು ಸರಬರಾಜು'' ಲೆಕ್ಕ ಶೀರ್ಷಿಕೆಯಲ್ಲಿ ಭರಿಸತಕ್ಕದ್ದು.

ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಸರಬರಾಜು ಆದ ದಿನಪತ್ರಿಕೆಗಳನ್ನು ಕ್ರಮಬದ್ಧವಾಗಿ ಆಯಾ ದಿನವೇ ಸಂಬಂಧಪಟ್ಟ ಪುಸ್ತಕಗಳಲ್ಲಿ ಪ್ರಾಚಾರ್ಯರ ಸಹಿಯೊಂದಿಗೆ ನಮೂದಿಸತಕ್ಕದ್ದು ಹಾಗೂ ಪ್ರತಿ 3 ತಿಂಗಳಿಗೆ ಒಂದು ಬಾರಿ ದರಪಟ್ಟಿಗಳನ್ನು ಕರೆದು ಅವುಗಳನ್ನು ವಿಲೇವಾರಿ ಮಾಡಿ ಅವುಗಳ ಲೆಕ್ಕವನ್ನು ಸುಸ್ಥಿತಿಯಲ್ಲಿಡತಕ್ಕದ್ದು. ಯಾವ ಕಾರಣಕ್ಕೂ ಮೂರು ತಿಂಗಳಿಗೆ ಮೀರಿ ದಾಸ್ತಾನು ಮಾಡಬಾರದು.

ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದ ವಾರಪತ್ರಿಕೆ ಮತ್ತು ಮಾಸಪತ್ರಿಕೆಗಳನ್ನು ಸಂಸ್ಥೆಯ ಗ್ರಂಥಾಲಯದ ಸಲುವಾಗಿ 5 ವರ್ಷಗಳವರೆಗೆ ಇಡಬಹುದು.

ದಿನಪತ್ರಿಕೆ ಮತ್ತು ವಾರಪತ್ರಿಕೆಗಳನ್ನು ತರಬೇತಿದಾರರ ಮತ್ತು ಶಿಕ್ಷಕರ ಉಪಯೋಗಕ್ಕಾಗಿ ವಾಚನಾಲಯದಲ್ಲಿರಿಸಬಹುದು.

ಸದರೀ ಆದೇಶ ಈ ಕೂಡಲೇ ಜಾರಿಗೆ ಬರುತ್ತದೆ. ಆದೇಶ ತಲುಪಿದ್ದಕ್ಕೆ ಸ್ವೀಕೃತಿಯನ್ನು ಕಳುಹಿಸತಕ್ಕದ್ದು.

3/7/91

ಕರಡು ಪ್ರತಿಯನ್ನು ಜಂ.ನಿ.(ತ)ರವರು ಒಪ್ಪಿದ್ದಾರೆ. ॥ ಜಂಟೀ ನಿರ್ದೇಶಕರು(ತರಬೇತಿ)ಪರವಾಗಿ, ಉದ್ಯೋಗ ಮತ್ತು ತರಬೇತಿ.

ಗೆ,

ಪ್ರಾಚಾರ್ಯರು,
ಕೈಗಾರಿಕಾ ತರಬೇತಿ ಸಂಸ್ಥೆ,
ದಾವಣಗೆರೆ.

ಪ್ರತಿಗಳನ್ನು:—
1. ಸಹಾಯಕ ನಿರ್ದೇಶಕರು(ಲೆಕ್ಕಪತ್ರ) ಇವರ ಮಾಹಿತಿಗಾಗಿ.
2. ಉಪ ನಿರ್ದೇಶಕರು(ಪರಿವೀಕ್ಷಣೆ) ಇವರ ಮಾಹಿತಿಗಾಗಿ.
3. ಸಹಾಯಕ ನಿರ್ದೇಶಕರು(ಪರಿವೀಕ್ಷಣೆ) ಇವರ ಮಾಹಿತಿಗಾಗಿ.
4. ಕಛೇರಿ ಪ್ರತಿ.
5. ಹೆಚ್ಚಿನ ಪ್ರತಿ (ವಿಭಾಗದ ಸಿಬ್ಬಂದಿ ವರ್ಗದವರಿಗೆ).

Annexure to Office order No.DET/PUR-1/CR-19/91-92

List of Daily News-papers and Magazines to be purchased according to sanctioned strength of ITIs as per the schedule.

## DAILY NEWS PAPERS

**KANNADA**

1. Prajavani
2. Kannada Prabha
3. Samyuktha Karnataka

**ENGLISH**

1. Indian Express
2. Deccan Herald
3. Hindu
4. Times of India

## MAGAZINES

**Category-I Kannada**

1. Sudha
2. Tharanga
3. Prajamatha

**Catagery-II English (Compulsory)**

1. Industries Bulletin
2. Employment News

(Optional)

1. Illustreted Weekly of India
2. India Today
3. Sport week of Sports Star/ Sports World
4. Competition success or Competition Review

**Category-III Technical Magazines**

1. Science Today
2. Janapriya Vignana
3. Electronics Today
4. Computer World.

30/7/91